| | | |
|---|---|---|
| ಓ ಎಸ್ | 10/2017 | ಪಿ.ಡಬ್ಲ್ಯೂ 1 |

ಇಂದು ದಿಃ 24.07.2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎ ಎಸ್ ವಕೀಲರಿಂದಃ-

ನಾನು 1 ನೇ ಪ್ರತಿವಾದಿಯ 2 ನೇ ಹೆಂಡತಿಯ ಮಗ. 4 ಮತ್ತು 5 ನೇ ಪ್ರತಿವಾದಿಗಳು 1 ನೆ ಪ್ರತಿವಾದಿಯ ಮೊದಲ ಹೆಂಡತಿಯ ಮಕ್ಕಳು. 6 ರಿಂದ 9 ನೆ ಪ್ರತಿವಾದಿಗಳು ಪುಟ್ಟಮಾದಪ್ಪನ ಅಂದರೆ 1 ನೆ ಪ್ರತಿವಾದಿಯ ಅಣ್ಣನ ಮಕ್ಕಳು. 4 ಮತ್ತು 5 ನೇ ಪ್ರತಿವಾದಿಗಳು ಒ ಎಸ್ 112/2007 ಅನ್ನು ಇದೆ ನ್ಯಾಯಾಲಯದಲ್ಲಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಆ ದಾವೆಯನ್ನು ಪುಟ್ಟಮಾದಪ್ಪನ ವಿರುದ್ಧ ಅವರ ತಂದೆಯ ಆಸ್ತಿ ವಿಭಜನೆ ಬಗ್ಗೆ ಹಾಕಿದ್ದು ನನಗೆ ಗೊತ್ತಿಲ್ಲ. 2007 ರಲ್ಲಿ ದಾಖಲಿಸಿದ ದಾವೆ ಬಗ್ಗೆ ನನಗೆ 2016 ರಲ್ಲಿ ತಿಳಿಯಿತು. ಆರಂಭದಲ್ಲಿ ನಾನು ಈ ದಾವೆಯನ್ನು 4 ಮತ್ತು 5 ಮತ್ತು 1 ನೆ ಪ್ರತಿವಾದಿಗೆ ಸೇರಿದ ಆಸ್ತಿಗೆ ಮಾತ್ರ ಸಲ್ಲಿಸಿದ್ದೆ ಎಂದರೆ ಸರಿ. ಆ ದಾವೆಯಲ್ಲಿ 1,4 ಮತ್ತು 5 ನೆ ಪ್ರತಿವಾದಿಗಳ ಆಸ್ತಿಯಲ್ಲಿ ಭಾಗ ಬೇಕು ಎಂದು ಹಾಕಿದ್ದೆ ಎಂದರೆ ಸರಿ. ಒ ಎಸ್ 112/2007 ಅನನು ದಾಖಲಿಸಿ 1,4 ಮತ್ತು 5 ನೆ ಪ್ರತಿವಾದಿಗಳಿಗೆ ತಲಾ 1/3 ಭಾಗ ಬಂದಿರುವುದು ಈ ದಾವೆ ದಾಖಲಿಸಿದಾಗ ನನಗೆ ಗೊತ್ತಿತ್ತು ಎಂದರೆ ಸಾಕ್ಷಿಯು ಗೊತ್ತಾದ ನಂತರ ದಾವೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಆರ್ ಟಿ ಸಿ ಯಲ್ಲಿ ನನ್ನ ಹೆಸರಿದ್ದ ಕಾರಣ ನನ್ನನ್ನು ಮತ್ತು ನನ್ನ ತಮ್ಮನನ್ನು 2 ಮತ್ತು 3 ನೆ ಪ್ರತಿವಾದಿಯನ್ನಾಗಿ ಮಾಡಿ ದಾವೆ ದಾಖಲಿಸಲಾಗಿತ್ತು ಎಂದರೆ ಸರಿಯಲ್ಲ.

ಒ ಎಸ್ 112/2007 ರ 3 ನೆ ಪ್ರತಿವಾದಿ ಮಂಜು ಬಿನ್ ಪುಟ್ಟಮಾದಪ್ಪ ನನ್ನ ತಮ್ಮ. ದಾವಾ ಅನುಸೂಚಿಯ 1 ಮತ್ತು 2 ನೇ ಆಸ್ತಿಗಳು 4 ಮತ್ತು 5 ನೆ ಪ್ರತಿವಾದಿಯ ತಂದೆಯ ಮನೆ ಆಸ್ತಿಗಳು ಎಂದರೆ ಸರಿಯಲ್ಲ, ನನ್ನ ತಂದೆ ಆಸ್ತಿ ಎಂದು ಸಾಕ್ಷಿ ನುಡಿಯುತ್ತಾರೆ.



ಒ ಎಸ್ 112/2007 ರಲ್ಲಿ ಡಿಕ್ರಿಯಾದ ನಂತರ ನಾನಾಗಲೀ ನನ್ನ ತಮ್ಮನಾಗಲೀ ಮತ್ತು ನನ್ನ ತಂದೆಯಾಗಲೀ ಮೇಲ್ಮನವಿ ಸಲ್ಲಿಸಿಲ್ಲ, ನನಗೆ ಅದರಲ್ಲಿ ನೋಟಿಸು ಬಂದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆ ದಾವೆಯು ಡಿಕ್ರಿಯಾಗಿ ನಂತರ ಎಫ್ ಡಿ ಪಿ ದಾಖಲಿಸಿ ನಂತರ ಜಾರಿ ಅರ್ಜಿ ದಾಖಲಿಸಿ ಪೊಲೀಸರ ಸಮಕ್ಷಮ ಸ್ವತ್ತನ್ನು ಸ್ವಾಧೀನ ತೆಗೆದುಕೊಳ್ಳಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪೋಲೀಸರ ರಕ್ಷಣೆ ಮೂಲಕ ಅವರು ಸ್ವಾಧೀನ ತೆಗೆದುಕೊಂಡಿದ್ದರೂ ಸಹ ನಾನು ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

ಒ ಎಸ್ 112/2007 ರಲ್ಲಿ ಈ ದಾವೆಯ 1 ನೆ ಪ್ರತಿವಾದಿಗೆ ಆಸ್ತಿ ಬಂದ ಕಾರಣ ನಾನು ನನ್ನ

ತಂದೆ ಅಂದರೆ 1 ನೆ ಪ್ರತಿವಾದಿಗೆ ಬಂದ ಆಸ್ತಿಯಲ್ಲಿ ಭಾಗ ಕೇಳಬಹುದು ಎಂದರೆ ಸರಿಯಲ್ಲ. ಒ ಎಸ್ 112/2007 ನ್ಯಾಯಾಲಯದಲ್ಲಿ ಡಿಕ್ರಿಯಾಗಿದ್ದರೂ ಸಹ ನಾನು 4 ಮತ್ತು 5 ನೆ ಪ್ರತಿವಾದಿಗಳಿಗೆ ತೊಂದರೆ ಕೊಟ್ಟ ಕಾರಣ ನನ್ನ ವಿರುದ್ಧ ಪೊಲೀಸು ದೂರು ದಾಖಲಾಗಿದ್ದು, ನನ್ನ ತಾಯಿ ಮತ್ತು ಹೆಂಡತಿ ಹೇಳಿಕೆ ನೀಡಿರುತ್ತಾರೆ ಮತ್ತು ಹೇಳಿಕೆಯನ್ನು ಸಾಕ್ಷಿಯು ಗುರುತಿಸಿದ ಕಾರಣ ಸದರಿ ದಾಖಲೆಯನ್ನು **ನಿ ಡಿ 1** ಎಂದು ಗುರುತಿಸಲಾಯಿತು.

ಒ ಎಸ್ 112/2007 ರಲ್ಲಿ ತೀರ್ಮಾನ ವಾಗಿ ತೀರ್ಪಿನ 6 ನೆ ಪುಟದಲ್ಲಿ 1, 4 ಮತ್ತು 5 ನೆ ಪ್ರತಿವಾದಿಗಳಿಗೆ ಮಾತ್ರ ದಾವಾ ಅನುಸೂಚಿಯ 1 ಮತ್ತು 2 ನೆ ಸ್ವತ್ತಿನಲ್ಲಿ ಹಕ್ಕು ಇದೆ ಎಂದು ತೀರ್ಮಾನವಾಗಿತ್ತು ಎಂಬ ವಿಚಾರ ನನಗೆ ಗೊತ್ತಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರತಿವಾದಿಗೂ ನಾನು ಹೆದರಿಸಿ ಬೆದರಿಸಿ ಜಮೀನಿಗೆ ಹೋಗದಂತೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಊರಿನಲ್ಲಿ ಕಾಳಸೋಮಪ್ಪ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ. ನನ್ನನ್ನು ಸಂಪತ್ ಕುಮಾರ್ ಎಂದು ಕರೆಯುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಉದ್ದೇಶಪೂರ್ವಕವಾಗಿ ಈ ದಾವೆ ಮೂಲಕ ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.



ಒ ಎಸ್ 57/2018 ರಲ್ಲಿ ಆಸ್ತಿಯಲ್ಲೂ ಸಹ 4 ಮತ್ತು 5 ನೆ ಪ್ರತಿವಾದಿಗಳಿಗೆ 1 ನೆ ಪ್ರತಿವಾದಿಗೆ ಬರುವ ಭಾಗಾಂಶದಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ.

4 ಮತ್ತು 5 ನೇ ಪ್ರತಿವಾದಿಯ ತಾಯಿಗೆ ಈ ದಾವೆಯ ದಾವಾ 1 ಮತ್ತು 2 ನೆ ಆಸ್ತಿ ಕೆ ವಿ ಸೀತಾರಾಮಯ್ಯನವರಿಂದ ಕ್ರಯಕ್ಕೆ ಪಡೆದ ಆಸ್ತಿ ಎಂದರೆ ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ಹಾಗಾಗಿ ದಾವಾ 1 ಮತ್ತು 2 ನೆ ಸ್ವತ್ತು 4 ಮತ್ತು 5 ನೇ ಪ್ರತಿವಾದಿಯ ತಾಯಿಯ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ ನನಗೆ ಭಾಗ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿಯ 1 ಮತ್ತು 2 ನೆ ಸ್ವತ್ತಿನಲ್ಲಿ 4 ಮತ್ತು 5 ನೇ ಪ್ರತಿವಾದಿ ಮತ್ತು 1 ನೆ ಪ್ರತಿವಾದಿಗೆ ಮಾತ್ರ ಹಕ್ಕು ಇದೆ ನನಗೆ ಇಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಇತರ ಪ್ರತಿವಾದಿಗಳ ಪಾಟೀ ಸವಾಲಿಗೆ ಮುಂದೂಡಿದೆ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.